# ಕರ್ನಾಟಕ ತೆರಿಗೆಗಳ ತಾತ್ಕಾಲಿಕ ವಸೂಲಿ ಅಧಿನಿಯಮ, 1974

(ಕರ್ನಾಟಕ ರಾಜ್ಯಪತ್ರ, ಗುರುವಾರ ಜನವರಿ 6, 2005 ಭಾಗ–4ಎ ಪುಟ 1 ರಿಂದ 2ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಈ ಅಧಿನಿಯಮದ ಅಡಿಯಲ್ಲಿ ಘೋಷಣೆಯನ್ನು ಮಾಡಲು ಅಧಿಕಾರ
4. ಈ ಅಧಿನಿಯಮದ ಅಡಿಯಲ್ಲಿನ ಘೋಷಣೆಯ ಪರಿಣಾಮ ಮತ್ತು ಅದರ ಕಾಲಾವಧಿ
5. ಘೋಷಣೆಯು ಪರಿಣಾಮಕಾರಿಯಾಗಿರುವುದು ನಿಂತು ಹೋದಾಗ ಮಾಡಬೇಕಾದ ಕೆಲವು ಮರುಪಾವತಿಗಳು


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1974ರ ಅಧಿನಿಯಮ 2.–** ಸಂಬಂಧಪಟ್ಟ ಶಾಸನದ ಅಧಿನಿಯಮಿತಿಯನ್ನು ನಿರೀಕ್ಷಿಸಿ, ರಾಜ್ಯ ಸರ್ಕಾರಕ್ಕೆ ತಾತ್ಕಾಲಿಕವಾಗಿ ತೆರಿಗೆ ವಸೂಲಿ ಮಾಡುವುದು ಸಾಧ್ಯವಾಗುವಂತೆ ಮಾಡುವುದು ಈ ವಿಧೇಯಕದ ಉದ್ದೇಶವಾಗಿದೆ. ಹೀಗೆ, ತೆರಿಗೆಯನ್ನು ವಿಧಿಸಲು ಅಥವಾ ಹೆಚ್ಚಿಸಲು ವಿಧಾನ ಸಭೆಯಲ್ಲಿ ಮಂಡಿಸಲಾದ ಒಂದು ವಿಧೇಯಕವು, ಸಾರ್ವಜನಿಕ ಹಿತಾಸಕ್ತಿಯಿಂದ ಆ ವಿಧೇಯಕದ ಯಾವುದೇ ಉಪಬಂಧವು ಕೂಡಲೇ ಪರಿಣಾಮಕಾರಿಯಾಗತಕ್ಕದ್ದು ಎಂಬ ಬಗ್ಗೆ ಒಂದು ಘೋಷಣೆಯನ್ನು ಒಳಗೊಂಡಿರಬಹುದು. ಇಂಥದೇ ಒಂದು ಶಾಸನವು ಕೇಂದ್ರ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರದಿಂದ ಅಧಿನಿಯಮಿತಗೊಂಡಿದೆ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ IV–2ಎ ಸಂಖ್ಯೆ 400, ದಿನಾಂಕ: 28.2.1974 ಪುಟ 4 ರಲ್ಲಿ ಪ್ರಕಟವಾಗಿದೆ.)

* * * *

# 1974ರ ಕರ್ನಾಟಕ ಅಧಿನಿಯಮ ಸಂಖ್ಯೆ 2

(1974ರ ಮಾರ್ಚ್ ಇಪ್ಪತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ.)

## ಕರ್ನಾಟಕ ತೆರಿಗೆಗಳ ತಾತ್ಕಾಲಿಕ ವಸೂಲಿ ಅಧಿನಿಯಮ, 1974

(1974ರ ಮಾರ್ಚ್ ಇಪ್ಪತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆ ಪಡೆದಿದೆ.)

ತೆರಿಗೆಗಳನ್ನು ವಿಧಿಸುವುದಕ್ಕೆ ಅಥವಾ ಹೆಚ್ಚಿಸುವುದಕ್ಕೆ ಸಂಬಂಧಪಟ್ಟ ವಿಧೇಯಕಗಳಲ್ಲಿರುವ ಉಪಬಂಧಗಳನ್ನು ಸೀಮಿತ ಅವಧಿಗಾಗಿ, ಕೂಡಲೇ ಪರಿಣಾಮಕಾರಿಯಾಗಿ ಮಾಡಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ತೆರಿಗೆಗಳನ್ನು ವಿಧಿಸುವುದಕ್ಕೆ ಅಥವಾ ಹೆಚ್ಚಿಸುವುದಕ್ಕೆ ಸಂಬಂಧಪಟ್ಟ ವಿಧೇಯಕಗಳಲ್ಲಿರುವ ಉಪಬಂಧಗಳನ್ನು ಸೀಮಿತ ಅವಧಿಗಾಗಿ ಕೂಡಲೇ ಪರಿಣಾಮಕಾರಿಯಾಗಿ ಮಾಡಲು ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆಗಳ ತಾತ್ಕಾಲಿಕ ವಸೂಲಿ ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ,-

(1) "ಘೋಷಿತ ಉಪಬಂಧ" ಎಂದರೆ, ವಿಧೇಯಕದ ಯಾವ ಉಪಬಂಧಕ್ಕೆ ಸಂಬಂಧಿಸಿದಂತೆ 3ನೇ ಪ್ರಕರಣದ ಅಡಿಯಲ್ಲಿ ಒಂದು ಘೋಷಣೆಯನ್ನು ಮಾಡಲಾಗಿದೆಯೋ ವಿಧೇಯಕದ ಆ ಉಪಬಂಧ;

(2) " ತೆರಿಗೆ " ಎಂಬುದು ಸಾಮಾನ್ಯವಾದ ಅಥವಾ ಸ್ಥಳೀಯವಾದ ಅಥವಾ ವಿಶೇಷವಾದ ಯಾವುದೇ ದರ, ಉಪಕರ, ಸುಂಕ, ಫೀಜು, ದಾರಿ ಸುಂಕ ಅಥವಾ ಇತರ ಸುಂಕ - ಇವುಗಳನ್ನು ಒಳಗೊಳ್ಳುತ್ತದೆ.

**3. ಈ ಅಧಿನಿಯಮದ ಅಡಿಯಲ್ಲಿ ಘೋಷಣೆಯನ್ನು ಮಾಡಲು ಅಧಿಕಾರ.–** ಒಂದು ತೆರಿಗೆಯನ್ನು ವಿಧಿಸುವುದಕ್ಕೆ ಅಥವಾ ಹೆಚ್ಚಿಸುವುದಕ್ಕೆ ಉಪಬಂಧ ಕಲ್ಪಿಸುವ ಸಲುವಾಗಿ ಕರ್ನಾಟಕ ವಿಧಾನ ಸಭೆಯಲ್ಲಿ ರಾಜ್ಯ ಸರ್ಕಾರದ ಪರವಾಗಿ ಒಂದು ವಿಧೇಯಕವನ್ನು ಮಂಡಿಸಬೇಕಾಗಿರುವಲ್ಲಿ , ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಿಂದ ಅಂಥ ವಿಧಿಸುವಿಕೆ ಅಥವಾ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿಧೇಯಕದಲ್ಲಿರುವ ಯಾವುದೇ ಉಪಬಂಧವು ಈ ಅಧಿನಿಯಮದ ಅಡಿಯಲ್ಲಿ ತಕ್ಷಣವೇ ಪರಿಣಾಮಕಾರಿಯಾಗಿರುವುದು ವಿಹಿತವೆಂಬ ಒಂದು ಘೋಷಣೆಯನ್ನು ವಿಧೇಯಕದಲ್ಲಿ ಸೇರಿಸುವಂತೆ ಮಾಡಬಹುದು.

**4. ಈ ಅಧಿನಿಯಮದ ಅಡಿಯಲ್ಲಿನ ಘೋಷಣೆಯ ಪರಿಣಾಮ ಮತ್ತು ಅದರ ಕಾಲಾವಧಿ.–** (1) ಘೋಷಿತ ಉಪಬಂಧವು, ಅದನ್ನು ಒಳಗೊಂಡಿರುವಂಥ ವಿಧೇಯಕವನ್ನು ಮಂಡಿಸಲಾದ ದಿನಾಂಕವು ಮುಕ್ತಾಯವಾದ ಕೂಡಲೇ ಕಾನೂನಿನ ಬಲವನ್ನು ಹೊಂದತಕ್ಕದ್ದು.

(2) ಒಂದು ಘೋಷಿತ ಉಪಬಂಧವು,-

(ಎ) ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿ ಇಲ್ಲದೆ ಅಧಿನಿಯಮಿತಿಯಾಗಿ ಅದು ಕಾರ್ಯಾಚರಣೆಗೆ ಬಂದಾಗ; ಅಥವಾ

(ಬಿ) ಕರ್ನಾಟಕ ವಿಧಾನ ಮಂಡಲವು ಅಂಗೀಕರಿಸಿದ ಒಂದು ಪ್ರಸ್ತಾವಕ್ಕೆ ಅನುಸಾರವಾಗಿ ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ, ಅಧಿಸೂಚನೆಯ ಮೂಲಕ, ಅದು ಕಾನೂನಿನ ಬಲವನ್ನು ಹೊಂದಿರುವುದು ನಿಂತು ಹೋಗತಕ್ಕದ್ದೆಂದು ನಿರ್ದೇಶಿಸಿದಾಗ; ಅಥವಾ

(ಸಿ) (ಎ) ಖಂಡ ಅಥವಾ (ಬಿ) ಖಂಡದ ಮೇರೆಗೆ ಅದು ಕಾನೂನಿನ ಬಲವನ್ನು ಹೊಂದಿರುವುದು ಈಗಾಗಲೇ ನಿಂತು ಹೋಗಿರದಿದ್ದರೆ, ಆಗ, ಘೋಷಿತ ಉಪಬಂಧವು (1)ನೇ ಉಪ ಪ್ರಕರಣದ ಅಡಿಯಲ್ಲಿ ಕಾನೂನಿನ ಬಲವನ್ನು ಹೊಂದಿದ ದಿನಾಂಕದಿಂದ ಅರವತ್ತನೇ ದಿನವು ಮುಕ್ತಾಯವಾದ ಮೇಲೆ,

– ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಕಾನೂನಿನ ಬಲವನ್ನು ಹೊಂದಿರುವುದು ನಿಂತು ಹೋಗತಕ್ಕದ್ದು.

**5. ಘೋಷಣೆಯು ಪರಿಣಾಮಕಾರಿಯಾಗಿರುವುದು ನಿಂತುಹೋದಾಗ ಮಾಡಬೇಕಾಗಿರುವ ಕೆಲವು ಮರುಪಾವತಿಗಳು.–** (1) 4ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಘೋಷಿತ ಉಪಬಂಧವು ಕಾನೂನಿನ ಬಲವನ್ನು ಹೊಂದಿರುವಂಥ ದಿನಾಂಕದಿಂದ ತರುವಾಯದ ಅರವತ್ತನೆಯ ದಿನವು ಮುಕ್ತಾಯವಾಗುವುದಕ್ಕೆ ಮುಂಚೆ, ತಿದ್ದುಪಡಿಯಾದ ರೂಪದಲ್ಲಿ ಅಂಥ ಉಪಬಂಧವು ಅಧಿನಿಯಮಿತಿಯಾಗಿ ಜಾರಿಗೆ ಬಂದಿರುವಲ್ಲಿ , ಆ ಅಧಿನಿಯಮಿತಿಯಲ್ಲಿ ಅಂಗೀಕರಿಸಲಾದ ಉಪಬಂಧವು, ಘೋಷಿತ ಉಪಬಂಧವಾಗಿದ್ದಿದ್ದರೆ ಹೇಗೆ ತೆರಿಗೆಯನ್ನು ವಸೂಲಿ ಮಾಡುತ್ತಿರಲ್ಲಿಲ್ಲವೋ ಹಾಗೆ ವಸೂಲಾದ ಎಲ್ಲ ತೆರಿಗೆಗಳನ್ನು ಮರು ಪಾವತಿ ಮಾಡತಕ್ಕದ್ದು:

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ಮರುಪಾವತಿ ಮಾಡಬಹುದಾದ ಯಾವುದೇ ತೆರಿಗೆಯ ದರವು, ಘೋಷಿತ ಉಪಬಂಧದಲ್ಲಿ ಪ್ರಸ್ತಾವಿಸಲಾದಂಥ ತೆರಿಗೆಯ ದರ ಮತ್ತು 4ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಘೋಷಿತ ಉಪಬಂಧವು ಕಾನೂನಿನ ಬಲವನ್ನು ಪಡೆದ ದಿನಾಂಕದ ನಿಕಟ ಪೂರ್ವದ ದಿನಾಂಕದಂದು ಜಾರಿಯಲ್ಲಿದ್ದ ತೆರಿಗೆಯ ದರದ ನಡುವಿನ ವ್ಯತ್ಯಾಸವನ್ನು ಮೀರತಕ್ಕದ್ದಲ್ಲ.

(2) ಒಂದು ಘೋಷಿತ ಉಪಬಂಧವು, 4ನೇ ಪ್ರಕರಣದ (2)ನೇ ಉಪ ಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಅಡಿಯಲ್ಲಿ ಕಾನೂನಿನ ಬಲವನ್ನು ಹೊಂದಿರುವುದು ನಿಂತು ಹೋಗಿರುವಲ್ಲಿ , ತೆರಿಗೆಯ ಸಂಬಂಧವಾಗಿ ಘೋಷಣೆಯನ್ನು ಮಾಡಿಲ್ಲದೇ ಇದ್ದರೆ ಹೇಗೆ ಅದನ್ನು ವಸೂಲಿ ಮಾಡುತ್ತಿರಲಿಲ್ಲವೋ ಹಾಗೆ, ವಸೂಲಿ ಮಾಡಲಾದ ಎಲ್ಲ ತೆರಿಗೆಗಳನ್ನು ಮರು ಪಾವತಿ ಮಾಡತಕ್ಕದ್ದು.

The above translation of the Karnataka Provisional Collection of Taxes Act, 1974 (2 of 1974) shall be the authoritative text in the Kannada Language under section 5A of the Karnataka Official Language Act, 1963 (Karnataka Act No.26 of 1963).

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಜಿ. ದಕ್ಷಿಣಾಮೂರ್ತಿ)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.